ಓ.ಎಸ್. ನಂ. 59 /2020 **ಪಿ.ಡಬ್ಲ್ಯೂ- 1**

<u>ಸಾಕ್ಷಿಯನ್ನು ದಿನಾಂಕ 2.3.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀಮತಿ ಎನ್.ಎಸ್ ವಕೀಲರಿಂದಃ</u>

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪ್ರತಿವಾದಿಯರು ನಮ್ಮ ಊರಿನಲ್ಲಿ ವಾಸವಾಗಿದ್ದರಿಂದ ಕಳೆದ 2 ವರ್ಷಗಳಿಂದ ಪರಿಚಯವಿರುತ್ತಾರೆ. ಈ ದಾವೆಯಲ್ಲಿ ಹೇಳಿರುವ ಆಸ್ತಿಯ ಖಾತ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಗಳು ಪ್ರತಿವಾದಿಯರು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿದಾರರು ಪ್ರತಿವಾದಿಯರ ಹೆಸರಿನಲ್ಲಿದ್ದವು ಎನ್ನುವರು. 1 ನೇ ಪ್ರತಿವಾದಿಯ ಹೆಸರಿನಲ್ಲಿ ನಿವೇಶನ ಇದ್ದು, 2 ನೇ ಪ್ರತಿವಾದಿಯ ಹೆಸರಿನಲ್ಲಿ ಮಳಿಗೆಗಳು ಇರುತ್ತದೆ. ದಾವಆಸ್ತಿಗಳ ಬಗ್ಗೆ ಇ-ಖಾತ 11 ಬಿ ಯನ್ನು ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೆ ಇ-ಖಾತವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಇಬ್ಬರು ಮಕ್ಕಳು ಇರುತ್ತಾರೆ. 2019 ರಲ್ಲಿ ಪ್ರತಿವಾದಿಯರ ಇಬ್ಬರು ಮಕ್ಕಳ ಪೈಕಿ ಒಬ್ಬರಿಗೆ ಮದುವೆಯಾಗಿದ್ದು, ಇನ್ನೊಬ್ಬರಿಗೆ ಮದುವೆ ನಿಶ್ಚಯವಾಗಿದ್ದು ಅವರು ವಿದ್ಯಾಭ್ಯಾಸ ಮಾಡುತ್ತಿರಲಿಲ್ಲ ಎಂದರೆ ಸರಿ. 2 ನೇ ಮಗಳ ಮದುವೆಯು ನಿಶ್ಚಯವಾಗಿದ್ದರಿಂದ 5 ಲಕ್ಷ ಹಣವನ್ನು ನನ್ನ ಯಜಮಾನರ ಬಳಿ ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಯಜಮಾನರು 5 ಲಕ್ಷ ಸಾಲ ನೀಡಬೇಕಾದರೆ ಅವರಿಗೆ ಸಂಬಂಧಪಟ್ಟ ಆಸ್ತಿಯನ್ನು ಭದ್ರತೆಗಾಗಿ ಆಧಾರಪತ್ರ ಬರೆದುಕೊಡಲು ಕೇಳಿರುತ್ತೇವೆ ಎಂದರೆ ಸರಿಯಲ್ಲ. ಮಾರಾಟದ ಮಾತುಕತೆಯಲ್ಲಿ ನಾನು, ನನ್ನ ಯಜಮಾನ, ನನ್ನ ತಾಯಿ ಮತ್ತು ಪ್ರತಿವಾದಿಯರು ಇದ್ದೆವು. ನಮ್ಮನ್ನು ಹೊರತುಪಡಿಸಿ ಬೇರೆ ಯಾರು ಮಾತುಕತೆಯಲ್ಲಿ ಇರಲಿಲ್ಲ. ಸಾಲದ ಭದ್ರತೆಗಾಗಿ ಪ್ರತಿವಾದಿಯರು ಆಧಾರಪತ್ರವನ್ನು ಬರೆದುಕೊಡಲು ಒಪ್ಪಿದ್ದು, ಅದನ್ನು ನಾನು ದುರುಪಯೋಗಪಡಿಸಿಕೊಂಡು ಕ್ರಯದ ಕರಾರನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ವಿದ್ಯಾಭ್ಯಾಸ ಮಾಡಿರುವುದಿಲ್ಲ, ಅವರಿಗೆ ಸಹಿ ಮಾಡಲು ಮಾತ್ರ ಬರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಮನೆಯಲ್ಲಿ 4 ಹಸುಗಳನ್ನು ಸಾಕಿದ್ದು ಹಾಲನ್ನು ಮಾರಾಟ ಮಾಡುತ್ತೇನೆ. ಹಾಲು ಮಾರಾಟ ಮಾಡಿದ ಹಣ ನನ್ನ ಖಾತೆಗೆ ಜಮೆ ಆಗುತ್ತದೆ. ದಿನಾಂಕ 16.11.2019 ರಂದು ಪ್ರತಿವಾದಿಯರಿಗೆ 5 ಲಕ್ಷ ಹಣವನ್ನು ನನ್ನ ಬ್ಯಾಂಕ್ ಖಾತೆಯಿಂದ ಡ್ರಾ ಮಾಡಿ ನೀಡಿರುವುದಿಲ್ಲ, ಮನೆಯಲ್ಲಿದ್ದ ಹಣವನ್ನು ಪ್ರತಿವಾದಿಯರಿಗೆ ನೀಡಿರುತ್ತೇನೆ. ನಿಪಿ1 ರಲ್ಲಿ ಹಣವನ್ನು ನಗದಾಗಿ ನೀಡಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನಗದಾಗೇ ನೀಡಿರುತ್ತೇನೆ ಎನ್ನುವರು. ಪ್ರತಿವಾದಿಯರಿಗೆ ಏನು ಆದಾಯವಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರಿಗೆ ದಾವಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ ಎಂದರೆ ನನಗೆ

ಗೊತ್ತಿರುವುದಿಲ್ಲ. ಪ್ರತಿವಾದಿಯರು ಬೆಂಗಳೂರಿನಲ್ಲಿ ಕೂಲಿ ಕೆಲಸ ಮಾಡಿಕೊಂಡು ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ದಿನಾಂಕ 16.11.2019 ರಂದು ಪ್ರತಿವಾದಿಯರು ದಾವಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದೇ ಕ್ರಯದ ಕರಾರನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ದಾಖಲೆಯನ್ನು ಹೆಚ್.ಡಿ.ಕೋಟೆಯ ಮಾಸ್ತಯ್ಯ ಎಂಬ ಪತ್ರಬರಹಗಾರರು ಬರೆದಿರುತ್ತಾರೆ. ನನ್ನ ಯಜಮಾನರು ಹಾಗೂ ಮಾಸ್ತಯ್ಯ ರವರು ದಾಖಲೆಯನ್ನು ತಯಾರಿಸಿದ ನಂತರ ಪ್ರತಿವಾದಿಯರನ್ನು ಪೋನ್ ಮಾಡಿ ಕರೆಸಿದ್ದು, ಆಗ ಅವರು ಬಂದು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಓದಲು ಮತ್ತು ಬರೆಯಲು ಬರದಿರುವ ಕಾರಣ ಆಧಾರಪತ್ರ ಎಂದು ತಿಳಿದುಕೊಂಡು ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ದಾಖಲೆಯನ್ನು ಮಾಸ್ತಯ್ಯ ರವರ ಕಛೇರಿಯಲ್ಲಿ ಬೆಳಿಗ್ಗೆ 11 ರಿಂದ 11.30 ರವರೆಗೆ ಟೈಪ್ ಮಾಡಲಾಗಿರುತ್ತದೆ, ಮಾತುಕತೆಯು 2-3 ತಿಂಗಳ ಹಿಂದೆ ಆಗಿರುತ್ತದೆ. ಆ ರೀತಿ 2-3 ತಿಂಗಳ ಹಿಂದೆ ಮಾತುಕತೆಯಾಗಿರುವ ಬಗ್ಗೆ ನಿಪಿ1 ಅಥವಾ ದಾವಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ದಾಖಲೆಯನ್ನು ಮದ್ಯಾಹ್ನ 2.50-3 ಗಂಟೆಗೆ ನೋಂದಣಿ ಮಾಡಲಾಗಿರುತ್ತದೆ. ನಿಪಿ1 ದಾಖಲೆಯನ್ನು ಟೈಪ್ ಮಾಡಿದಾಗ ಪ್ರತಿವಾದಿಯರು ಹಾಜರಿರಲಿಲ್ಲ, ಅವರು ಕೇವಲ ಸಹಿ ಮಾಡುವಾಗ ಮಾತ್ರ ಬಂದಿರುತ್ತಾರೆ ಎಂದರೆ ಸಾಕ್ಷಿದಾರರು ಅವರೇ ಹೇಳಿ ಬರೆಸಿರುತ್ತಾರೆ ಎನ್ನುವರು. ಪ್ರತಿವಾದಿಯರು ಆಧಾರಪತ್ರವನ್ನು ಮಾಡಿಕೊಡಲು ಒಪ್ಪಿದ್ದು ನಾನು ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುವುದರಿಂದ ದಾವಆಸ್ತಿಗಳ ವಿವರ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ1 ದಾಖಲೆಗೆ ಸೋಮು ಮತ್ತು ಸೋಮಣ್ಣ ರವರು ಸಹಿ ಮಾಡಿರುತ್ತಾರೆ. ಅವರು ನಿಮಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ಸಾಕ್ಷಿದಾರರು ಪ್ರತಿವಾದಿಯರೇ ಅವರನ್ನು ಕರೆದುಕೊಂಡು ಬಂದಿರುತ್ತಾರೆ ಎನ್ನುವರು. ಸದರಿ ಸೋಮು ಮತ್ತು ಸೋಮಣ್ಣ ರವರ ವಿಳಾಸ ನನಗೆ ಗೊತ್ತಿರುವುದಿಲ್ಲ, ಪ್ರತಿವಾದಿಯರೇ ಅವರನ್ನು ಕರೆದುಕೊಂಡು ಬಂದಿರುತ್ತಾರೆ. ಸದರಿ ಸೋಮು ಮತ್ತು ಸೋಮಣ್ಣ ರವರು ನನ್ನ ಯಜಮಾನರ ಸ್ನೇಹಿತರು ಎಂದರೆ ಸರಿಯಲ್ಲ. ಅವರು ನನ್ನ ಯಜಮಾನರ ಸ್ನೇಹಿತರಾದ್ದರಿಂದ ನಾವು ಸೃಷ್ಟಿ ಮಾಡಿದ ಕರಾರುಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರು ದಾವಆಸ್ತಿಯನ್ನು ಮಾರಾಟ ಮಾಡಲು ಒಪ್ಪಿರುವುದಿಲ್ಲ ಮತ್ತು ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಗಳ 11 ಬಿ ಖಾತೆಯು ಆಗಲೇ ರೆಡಿ ಇದ್ದುದರಿಂದ ಪ್ರತಿವಾದಿಯರು ನಿಜವಾಗಿ ಮಾರಾಟ ಮಾಡುವ ಉದ್ದೇಶವಿದ್ದಲ್ಲಿ ನೇರವಾಗಿ ಕ್ರಯಪತ್ರವನ್ನು ಬರೆದುಕೊಡುತ್ತಿದ್ದರು ಎಂದರೆ ಸಾಕ್ಷಿದಾರರು ಪ್ರತಿವಾದಿಯರೇ 3 ವರ್ಷದ ವಾಯಿದೆ ಒಳಗೆ ಕ್ರಯಪತ್ರ ಬರೆದುಕೊಡುವುದಾಗಿ ಹೇಳಿರುತ್ತಾರೆ ಎನ್ನುವರು. 2 ಲಕ್ಷ ಬಾಕಿ ಹಣವನ್ನು ಈ ದಾಖಲೆಗಾಗಿ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಸಹಿ ಮಾಡಿರುವ ಸಹನಾ ಎಂಬುವವರ ವಿವರವನ್ನು

ನಿಪಿ1 ರಲ್ಲಿ ಬರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಅವರು ಬೆಂಗಳೂರಿನಲ್ಲಿ ವಾಸವಿದ್ದು ನೋಂದಣಿಯಾದ ನಂತರ ಸಂಜೆ 6 ಗಂಟೆಗೆ ಬಂದು ಅವರೇ ಸಹಿ ಮಾಡಿರುತ್ತಾರೆ ಎನ್ನುವರು. ಪ್ರತಿವಾದಿಯರು ನಮ್ಮ ಊರಿನಲ್ಲಿ ವಾಸವಾಗಿದ್ದರು ಎಂದು ನಾನು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ ಕಂಡು ಬರುವ ಸಹನಾ ಎಂಬ ಸಹಿಯು ಪ್ರತಿವಾದಿಯರ ಮಗಳ ಸಹಿಯಾಗಿರುವುದಿಲ್ಲ, ಅದನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ನಿಪಿ2 ನೋಟಿಸನ್ನು ಪ್ರತಿವಾದಿಯರಿಗೆ ಅಣ್ಣಯ್ಯಪ್ಪನ ಶೆಡ್ಡು, ಪಡುಕೋಟೆ ಅಂಚೆ ಎಂಬ ವಿಳಾಸಕ್ಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ನೋಟಿಸನ್ನು ನೀಡಿದಾಗ ಪ್ರತಿವಾದಿಯರು ಮತ್ತು ಅವರ ಕುಟುಂಬದ ಸದಸ್ಯರು ಬೆಂಗಳೂರಿನಲ್ಲಿ ವಾಸವಿದ್ದರು ಎಂದರೆ ಸಾಕ್ಷಿದಾರರು ನಮ್ಮ ಊರಾದ ಕೋಟೆಹುಂಡಿಯಲ್ಲಿ ವಾಸವಾಗಿದ್ದರು ಎನ್ನುವರು. ನನ್ನ ಊರಿನ ವಿಳಾಸಕ್ಕೆ ನೋಟಿಸು ನೀಡಿಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಪ್ರತಿವಾದಿಯರ ವಿಳಾಸದ ದಾಖಲೆಗಳು ಹೆಚ್.ಡಿ.ಕೋಟೆಯ ವಿಳಾಸ ಇದ್ದು ಅವರು ಅದೇ ವಿಳಾಸವನ್ನು ನನಗೆ ನೀಡಿದ್ದರಿಂದ ಸದರಿ ವಿಳಾಸಕ್ಕೆ ನೋಟಿಸು ನೀಡಿರುತ್ತೇನೆ, ನಮ್ಮ ಊರಿನ ವಿಳಾಸಕ್ಕೆ ನೋಟಿಸ್ ನೀಡಿದ್ದರೆ ಅವರು ಪಡೆದುಕೊಳ್ಳುತ್ತಿರಲಿಲ್ಲ ಎನ್ನುವರು. ಪ್ರತಿವಾದಿಯರು ನಿಪಿ2 ರಲ್ಲಿ ನಮೂದಿಸಿರುವ ವಿಳಾಸದಲ್ಲಿ ಸದರಿ ಸಮಯದಲ್ಲಿ ವಾಸವಿರಲಿಲ್ಲ, ಬೆಂಗಳೂರಿನಲ್ಲಿ ವಾಸವಾಗಿದ್ದರು, ಆ ಕಾರಣಕ್ಕೆ ಅವರಿಗೆ ನೋಟಸ್ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ9 ರಂತೆ ಪುನಃ ನಾನು ನೋಟಿಸ್ ನೀಡಿದಾಗ ಸದರಿ ನೋಟಿಸಿಗೆ ಪ್ರತಿವಾದಿಯರು ನಿಪಿ14 ರಂತೆ ಉತ್ತರ ನೀಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯರು ದಿನಾಂಕ 16.11.2019 ರಂದು 5 ಲಕ್ಷ ಹಣವನ್ನು ಸಾಲವಾಗಿ ಪಡೆದುಕೊಂಡಾಗ ಪ್ರತಿವಾದಿಯರಿಂದ ನಾನು ಭದ್ರತೆಗಾಗಿ 1 ನೇ ಪ್ರತಿವಾದಿಗೆ ಸೇರಿದ ಎಸ್.ಬಿ.ಐ ಬ್ಯಾಂಕಿನ ಸಹಿ ಮಾಡಿರುವ 2 ಖಾಲಿ ಚೆಕ್ಕು ಮತ್ತು 2 ನೇ ಪ್ರತಿವಾದಿಯ ಸೇರಿದ ಫೆಡರಲ್ ಬ್ಯಾಂಕಿನ ಸಹಿ ಮಾಡಿರುವ 2 ಖಾಲಿ ಚೆಕ್ಕು ಹಾಗೂ 50 ರೂ. ಮೌಲ್ಯದ ಸಹಿ ಮಾಡಿರುವ ಖಾಲಿ ಸ್ಟಾಂಪ್ ಪೇಪರನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಗಳನ್ನು ನನಗೆ ನೋಂದಣಿ ಮಾಡಿಕೊಡದಿದ್ದಲ್ಲಿ ಸದರಿ ಖಾಲಿ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಬೇರೆಯವರ ಮೂಲಕ ಕೇಸು ಹಾಕಿಸುವುದಾಗಿ ಪ್ರತಿವಾದಿಯರನ್ನು ಬೆದರಿಸಿರುತ್ತೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ 4 ಖಾಲಿ ಚೆಕ್ಕು ಹಾಗೂ ಖಾಲಿ ಛಾಪಾ ಕಾಗದವನ್ನು ದುರುಪಯೋಗಪಡಿಸಿಕೊಂಡಲ್ಲಿ ಅದಕ್ಕೆ ನಾನೆ ಜವಬ್ದಾರಿಯಾಗುತ್ತೇನೆ ಎಂದರೆ ಸಾಕ್ಷಿದಾರರು ಯಾವುದೇ ಚೆಕ್ ಮತ್ತು ಸ್ಟಾಂಪ್ ಪೇಪರನ್ನು ನೀಡಿರುವುದಿಲ್ಲ ಎನ್ನುವರು.

9900661352 ನನ್ನ ಯಜಮಾನರ ಮೊಬೈಲ್ ನಂಬರ್ ಎಂದರೆ ಸರಿ. 1 ನೇ ಪ್ರತಿವಾದಿಯ ಅಳಿಯ ಅಂದರೆ ಅವರ ಮಗಳ ಗಂಡ ಜವರೇಗೌಡ ಎಂದರೆ ನನಗೆ ಅವರ ಹೆಸರು ಗೊತ್ತಿರುವುದಿಲ್ಲ ಎನ್ನುವರು. ಸದರಿ

ಜವರೇಗೌಡರ ಸ್ನೇಹಿತನ ಹೆಸರು ರಾಮಣ್ಣ ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಪಡೆದಿರುವ 5 ಲಕ್ಷ ಹಣಕ್ಕೆ ಬಡ್ಡಿಯನ್ನು ನನಗೆ ನಗದಾಗಿ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. 5 ಲಕ್ಷದ ಅಸಲಿನ ಪೈಕಿ ದಿನಾಂಕ 15.11.2021 ರಂದು 30 ಸಾವಿರ, 19.11.2021 ರಂದು 7 ಸಾವಿರ ಹಣವನ್ನು ಪೋನ್ ಪೇ ಮೂಲಕ ಸದರಿ 1 ನೇ ಪ್ರತಿವಾದಿಯ ಅಳಿಯ ಜವರೇಗೌಡರು ನನ್ನ ಯಜಮಾನರಿಗೆ ಪಾವತಿ ಮಾಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ಯಜಮಾನರು ಇಟ್ಟಿಗೆ, ಮರಳನ್ನು ಮಾರಾಟ ಮಾಡುತ್ತಿದ್ದು, ಅದರ ಬಾಬ್ತು ಪಡೆದುಕೊಂಡಿರಬಹುದು, ಆ ವ್ಯವಹಾರ ಬೇರೆ ಎನ್ನುವರು. ನನ್ನ ಯಜಮಾನರು ಇಟ್ಟಿಗೆ, ಮರಳು ವ್ಯಾಪಾರ ಮಾಡುತ್ತಿರುವ ಬಗ್ಗೆ ದಾಖಲಾತಿಯನ್ನು ನೀಡಿರುವುದಿಲ್ಲ. ಪ್ರತಿವಾದಿಯರು ಮತ್ತು ಅವರ ಅಳಿಯ ಮತ್ತು ಮೇಲೆ ಹೇಳಿದ ರಾಮಣ್ಣ ಇಟ್ಟಿಗೆ, ಮರಳನ್ನು ಖರೀದಿ ಮಾಡಲು ಅವರು ಯಾವುದೇ ಮನೆಯನ್ನು ಕಟ್ಟುತ್ತಿರಲಿಲ್ಲ, ಮೇಲೆ ಹೇಳಿದ ಹಣವನ್ನು ನನ್ನಿಂದ ಪಡೆದ ಸಾಲದ ಹಣದ ಬಾಬ್ತು ವಾಪಸ್ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ 28.6.2021 ರಂದು 15 ಸಾವಿರ, 25.7.2021 ರಂದು 3 ಸಾವಿರ, 23.7.2021 ರಂದು 12 ಸಾವಿರ, 11.7.2021 ರಂದು 15 ಸಾವಿರ ಹಣವನ್ನು ಪ್ರತಿವಾದಿಯರ ಅಳಿಯನ ಸ್ನೇಹಿತನಾದ ರಾಮಣ್ಣ ರವರು ನನ್ನ ಗಂಡನ ಮೊಬೈಲಿಗೆ ಪೋನ್ ಪೇ ಮೂಲಕ ಸಾಲದ ಹಣವನ್ನು ವಾಪಸ್ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ನನ್ನ ಯಜಮಾನರ ಬಳಿ ಹಣವನ್ನು ಪಡೆದು ಅದನ್ನು ವಾಪಸ್ ನೀಡಿರುತ್ತಾರೆ ಎನ್ನುವರು. ಸದರಿ ರಾಮಣ್ಣ ರವರು ನನ್ನ ಯಜಮಾನರಿಗೆ ಪರಿಚಯಸ್ದರಾಗಿರುವುದಿಲ್ಲ. ಪ್ರತಿವಾದಿಯರು ಪಡೆದುಕೊಂಡಿರುವ 5 ಲಕ್ಷದ ಸಾಲದ ಎಲ್ಲಾ ಬಡ್ಡಿಯನ್ನು ಪಾವತಿಸಿದ್ದು, ಅಸಲಿನ ಪೈಕಿ 82 ಸಾವಿರ ಹಣವನ್ನು ನನ್ನ ಯಜಮಾನರ ಮೊಬೈಲಿಗೆ ವಾಪಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನನ್ನ ಯಜಮಾನರಿಂದ ಹಣ ಪಡೆದು ಅದನ್ನು ವಾಪಸ್ ನೀಡಿರುತ್ತಾರೆ ಎನ್ನುವರು. ಪ್ರತಿವಾದಿಯರು ದಿನಾಂಕ 10.1.2023 ರಂದು ಬಾಕಿ ಹಣವನ್ನು ಪಾವತಿಸಲು ಹೆಚ್.ಡಿ.ಕೋಟೆಯ ನೋಂದಣಾಧಿಕಾರಿ ಕಛೇರಿಗೆ ಬಂದಿದ್ದು ನಾನು ಹೆಚ್ಚುವರಿಯಾಗಿ 2 ಲಕ್ಷ ಪಾವತಿಸಿದರೆ ಮಾತ್ರ ಪ್ರತಿ ವರ್ಗಾವಣೆ ಪತ್ರ ಬರೆದುಕೊಡುವುದಾಗಿ ಹೇಳಿ ವಾಪಸ್ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಈಗಲೂ ಸಹ ಪ್ರತಿವಾದಿಯರು ಬಾಕಿ ಹಣವನ್ನು ನೀಡಲು ಸಿದ್ದರಿರುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಆಸ್ತಿಯನ್ನು ಬರೆದುಕೊಡಬೇಕು ಎನ್ನುವರು. ದಾವಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುವುದರಿಂದ ಪ್ರತಿವಾದಿಯರ ಇಬ್ಬರೂ ಮಕ್ಕಳಿಗೂ ಹಕ್ಕು ಇರುತ್ತದೆ ಎಂದರೆ ಸಾಕ್ಷಿದಾರರು ಪ್ರತಿವಾದಿಯರ ಹೆಸರಿನಲ್ಲಿ ಆಸ್ತಿಯ ದಾಖಲೆಗಳು ಇದ್ದು ಅವರು ಬರೆದುಕೊಟ್ಟಿರುತ್ತಾರೆ ಎನ್ನುವರು. ನಾನು ದಾವಆಸ್ತಿಗಳ ಮೂಲ ದಾಖಲೆಯನ್ನು ನೋಡಿರುತ್ತೇನೆ. ಯಾವ ದಾಖಲಾತಿ ನೋಡಿರುತ್ತೀರಿ ಎಂದರೆ ಸಾಕ್ಷಿದಾರರು 11 ಬಿ ಖಾತೆಯನ್ನು ನೋಡಿರುತ್ತೇನೆ ಎನ್ನುವರು. ನಾನು ಈ ದಾವೆಯಲ್ಲಿ ಯಾವುದೆ ಮೂಲ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯ ಮೌಲ್ಯ ಈಗ ಜಾಸ್ತಿಯಾಗಿರುವುದರಿಂದ ನಾನು, ನನ್ನ ಯಜಮಾನರು, ಸೋಮು ಹಾಗೂ ಸೋಮಣ್ಣ ಸೇರಿಕೊಂಡು ಕ್ರಯದ ಕರಾರುಪತ್ರವನ್ನು ಸೃಷ್ಟಿ ಮಾಡಿ

ಪ್ರತಿವಾದಿಯರಿಗೆ ಮೋಸ ಮಾಡುವ ಉದ್ದೇಶ ಹೊಂದಿರುತ್ತೇವೆ ಎಂದರೆ ಸರಿಯಲ್ಲ. ನಾನು ಬಡ್ಡಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಿಪಿ2 ನೋಟಿಸ್ ನೀಡಿದ ದಿನಾಂಕದಿಂದ ನಿಮ್ಮ ಖಾತೆಯಲ್ಲಿ 2 ಲಕ್ಷ ಹಣ ಇರುತ್ತದಾ ಎಂದರೆ ಸಾಕ್ಷಿದಾರರು ಮನೆಯಲ್ಲಿ ನಗದಾಗಿ ಇಟ್ಟಿರುತ್ತೇನೆ ಎನ್ನುವರು. ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡಲು ತೊಂದರೆ ಇಲ್ಲ. ಪ್ರತಿವಾದಿಯರು ಆಧಾರಪತ್ರವನ್ನು ಬರೆದುಕೊಟ್ಟಿದ್ದು ಕರಾರುಪತ್ರವಾಗದಿರುವುದರಿಂದ ನಾನು 2 ಲಕ್ಷ ಹಣವನ್ನು ಬ್ಯಾಂಕಿನಲ್ಲಿ ಜಮೆ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಪಾಲಿನ ಕರ್ತವ್ಯವನ್ನು ನಿರ್ವಹಿಸಲು ಸಿದ್ದವಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.